ದೂರವಾಣಿ : 2774 6981
ಫ್ಯಾಕ್ಸ್ : 2774 5060
ವೆಬ್‌ಸೈಟ್ : www.magadi-pa.in

# ಮಾಗಡಿ ಯೋಜನಾ ಪ್ರಾಧಿಕಾರ

ಕಛೇರಿ : ಸರ್ಕಾರಿ ಕಛೇರಿಗಳ ಸಂಕೀರ್ಣ, ಎರಡನೇ ಮಹಡಿ, ತಿರುಮಲೆ ರಸ್ತೆ, ಮಾಗಡಿ ಟೌನ್, ರಾಮನಗರ ಜಿಲ್ಲೆ, ಪಿನ್ ಕೋಡ್ - 562 120

ಸಂಖ್ಯೆ: ಮಾಯೋಪ್ರಾ/ಎಲ್‌ಎಒ/90/2015-16 | 1068 ದಿನಾಂಕ: 13-03-2017

## ತಾತ್ಕಾಲಿಕ ವಸತಿ ವಿನ್ಯಾಸ ಅನುಮೋದನೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2ಎ)ರಡಿಯಲ್ಲಿ)

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಮುದ್ದಯ್ಯನಪಾಳ್ಯ ಗ್ರಾಮದ ಸ.ನಂ. 16/5 ರಲ್ಲಿ 1 ಎಕರೆ 17 ಗುಂಟೆ, ಸ.ನಂ. 17/1 ರಲ್ಲಿ 1 ಎಕರೆ 04 ಗುಂಟೆ, ಸ.ನಂ. 17/9ರಲ್ಲಿ 1 ಎಕರೆ 12.5 ಗುಂಟೆ, ಸ.ನಂ. 17/10 ರಲ್ಲಿ 36.5 ಗುಂಟೆ, ಸ.ನಂ. 18 ರಲ್ಲಿ 25 ಗುಂಟೆ ಒಟ್ಟು 5 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:
1. ಅರ್ಜಿದಾರರ ಮನವಿ ಪತ್ರದ ದಿನಾಂಕ: 29-03-2016.
2. ದಿನಾಂಕ 30-03-2016ರಂದು ನಡೆದ ಪ್ರಾಧಿಕಾರದ 56ನೇ ಸಭೆಯ ವಿಷಯ ಸಂಖ್ಯೆ: 31/20ರ ನಿರ್ಣಯದಂತೆ.
3. ಈ ಪ್ರಾಧಿಕಾರದ ಹಣ ಪಾವತಿ ತಿಳುವಳಿಕೆ ಪತ್ರದ ದಿನಾಂಕ: 01-07-2016.
4. ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿದ ಬಗ್ಗೆ ಡಿಡಿ. ಸಂಖ್ಯೆ: 516075, 516076 (ರಶೀದಿ ಸಂಖ್ಯೆ:307) ದಿನಾಂಕ:06-09-2016 ರಲ್ಲಿ ಕ್ರಮವಾಗಿ ರೂ. 5,37,500/- ಮತ್ತು ರೂ. 4,39,500/-.
5. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ/24/ಶಾಸನ/2015, ಬೆಂಗಳೂರು, ದಿನಾಂಕ: 10-09-2015.

* * * * * * * *

## ಪ್ರಸ್ತಾವನೆ :-

ಶ್ರೀ ಕೆ.ಎನ್. ಬೋರೇಗೌಡ, ನಿರ್ದೇಶಕರು, ಮೆ॥ ಕೆ.ಎನ್.ಎಸ್ ಇನ್‌ಫ್ರಾಸ್ಟ್ರಕ್ಚರ್ ಇವರು ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಮುದ್ದಯ್ಯನಪಾಳ್ಯ ಗ್ರಾಮದ ಸ.ನಂ. 16/5 ರಲ್ಲಿ 1 ಎಕರೆ 17 ಗುಂಟೆ, ಸ.ನಂ. 17/1 ರಲ್ಲಿ 1 ಎಕರೆ 04 ಗುಂಟೆ, ಸ.ನಂ. 17/9ರಲ್ಲಿ 1 ಎಕರೆ 12.5 ಗುಂಟೆ, ಸ.ನಂ. 17/10 ರಲ್ಲಿ 36.5 ಗುಂಟೆ, ಸ.ನಂ. 18 ರಲ್ಲಿ 25 ಗುಂಟೆ ಒಟ್ಟು 5 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿ ಉಲ್ಲೇಖ (01) ರಲ್ಲಿ ಮನವಿ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನನ್ನು ವಸತಿ ವಲಯಕ್ಕಾಗಿ ಕಾಯ್ದಿರಿಸಲಾಗಿದೆ. ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಇವರಿಂದ ಈ ಕೆಳಕಂಡ ಅಧಿಕೃತ

ಜ್ಞಾಪನ ಪತ್ರಗಳಂತೆ ಒಟ್ಟು 5 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನನ್ನು ವಾಸದ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶಗಳನ್ನು ಹೊರಡಿಸಿರುತ್ತಾರೆ.

| ಕ್ರ ಸಂ. | ಗ್ರಾಮ | ಸರ್ವೆ ನಂ. | ವಿಸ್ತೀರ್ಣ ಎ – ಗುಂ. | ಭೂ ಪರಿವರ್ತನೆ ಅಧಿಕೃತ ಜ್ಞಾಪನ ಪತ್ರ ಮತ್ತು ದಿನಾಂಕ |
|---|---|---|---|---|
| 1. | ಮುದ್ದಯ್ಯನಪಾಳ್ಯ | 16/5 | 1–17 | ಸಂ:ಎಎಲ್‌ಎನ್/(ಎಸ್‌ಟಿ)/ಎಸ್‌ಆರ್/179/2010–11 ದಿ: 18–04–2011. |
| 2. | | 17/1 | 1–04 | ಸಂ:ಎಎಲ್‌ಎನ್/(ಎಸ್‌ಟಿ)/ಎಸ್‌ಆರ್/91/2011–12 ದಿ: 22–02–2012 |
| 3. | | 17/9 | 1–12.08 | ಸಂ:ಎಎಲ್‌ಎನ್/(ಎಸ್‌ಟಿ)/ಎಸ್‌ಆರ್/35/2012–13 ದಿ: 30–05–2014 |
| 4. | | 17/10 | 0–36.08 | ಸಂ:ಎಎಲ್‌ಎನ್/(ಎಸ್‌ಟಿ)/ಎಸ್‌ಆರ್/61/2015–16 ದಿ: 26–11–2015 |
| 5. | | 18 | 0–25 | ಸಂ:ಎಎಲ್‌ಎನ್/(ಎಸ್‌ಟಿ)/ಎಸ್‌ಆರ್/37/2011–12 ದಿ: 28–11–2011 |
| ಒಟ್ಟು | | | 5–15 | |

ಉಲ್ಲೇಖ (02)ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ತೀರ್ಮಾನಿಸಲಾಗಿದೆ.

ಪ್ರಾಧಿಕಾರದ ತೀರ್ಮಾನದಂತೆ ಅರ್ಜಿದಾರರಿಗೆ ಶುಲ್ಕ ಪಾವತಿಸುವಂತೆ ಉಲ್ಲೇಖ (03)ರಲ್ಲಿ ತಿಳಿಸಲಾಗಿತ್ತು. ಅದರಂತೆ ಉಲ್ಲೇಖ (04)ರಲ್ಲಿ ಅರ್ಜಿದಾರರು ಅಗತ್ಯ ಶುಲ್ಕ ರೂ. 9,77,000/-ಗಳನ್ನು ಡಿಡಿ ಮೂಲಕ ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಆದ್ದರಿಂದ ಕೆಟಿಸಿಪಿ (ತಿದ್ದುಪಡಿ) ಕಾಯ್ದೆ 2015ರ ಕಲಂ 17(2ಎ)ರಡಿಯಲ್ಲಿ ಪ್ರಸ್ತಾಪಿತ ಜಮೀನಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

## ಆದೇಶ ಸಂಖ್ಯೆ: ಮಾಯೋಪ್ರಾ/ಎಲ್‌ಎಓ/90/2015–16, ದಿನಾಂಕ: 13–03–2017

ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಮುದ್ದಯ್ಯನಪಾಳ್ಯ ಗ್ರಾಮದ ಸ.ನಂ. 16/5 ರಲ್ಲಿ 1 ಎಕರೆ 17 ಗುಂಟೆ, ಸ.ನಂ. 17/1 ರಲ್ಲಿ 1 ಎಕರೆ 04 ಗುಂಟೆ, ಸ.ನಂ. 17/9ರಲ್ಲಿ 1 ಎಕರೆ 12.5 ಗುಂಟೆ, ಸ.ನಂ. 17/10 ರಲ್ಲಿ 36.5 ಗುಂಟೆ, ಸ.ನಂ. 18 ರಲ್ಲಿ 25 ಗುಂಟೆ ಒಟ್ಟು 5 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015ರ ಕಲಂ 17(2ಎ) ರನ್ವಯ ವಿನ್ಯಾಸ ನಕ್ಷೆಯನ್ನು ಭೌತಿಕವಾಗಿ ಜಮೀನಿನ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸಲು ಮಾತ್ರ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡಿಸಿ, ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲಾಗಿದೆ.

1. ಈಗ ನೀಡಿರುವ ವಿನ್ಯಾಸ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನಾಂಕದಿಂದ ಎರಡು (02) ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸದ ಅಭಿವೃದ್ಧಿ ಕಾರ್ಯ

ದೂರವಾಣಿ : 2774 6981
ಫ್ಯಾಕ್ಸ್ : 2774 5060
ವೆಬ್‌ಸೈಟ್ : www.magadi-pa.in

# ಮಾಗಡಿ ಯೋಜನಾ ಪ್ರಾಧಿಕಾರ

ಕಛೇರಿ : ಸರ್ಕಾರಿ ಕಛೇರಿಗಳ ಸಂಕೀರ್ಣ, ಎರಡನೇ ಮಹಡಿ, ತಿರುಮಲೆ ರಸ್ತೆ, ಮಾಗಡಿ ಟೌನ್, ರಾಮನಗರ ಜಿಲ್ಲೆ, ಪಿನ್ ಕೋಡ್ – 562 120

ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ಕನಿಷ್ಠ ಮೂರು (03) ತಿಂಗಳು ಮೊದಲೇ ನವೀಕರಿಸಿಕೊಳ್ಳತಕ್ಕದ್ದು.

2. ಕೆಟಿಸಿಪಿ (ತಿದ್ದುಪಡಿ) ಕಾಯ್ದೆ 2015ರ ಕಲಂ 17(2ಎ)ರಂತೆ ಅನುಮೋದಿತ ತಾತ್ಕಾಲಿಕ ವಿನ್ಯಾಸದಲ್ಲಿನ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಾಗವನ್ನು ಪ್ರಾಧಿಕಾರಕ್ಕೆ ಪುಕ್ಕಟೆಯಾಗಿ ಹಸ್ತಾಂತರಿಸಿರುವ ಪರಿತ್ಯಾಜನಾ ಪತ್ರ, ಉದ್ಯಾನವನ ಮತ್ತು ಬಯಲುಜಾಗ ಹಾಗೂ ರಸ್ತೆಗಾಗಿ ಕಾಯ್ದಿರಿಸಿದ ಜಾಗವನ್ನು ತಾವರೆಕೆರೆ ಗ್ರಾಮ ಪಂಚಾಯಿತಿಗೆ ಪುಕ್ಕಟೆಯಾಗಿ ಹಸ್ತಾಂತರಿಸಿರುವ ಪರಿತ್ಯಾಜನಾ ಪತ್ರದ ಪ್ರತಿಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.
3. ತಾತ್ಕಾಲಿಕ ವಸತಿ ವಿನ್ಯಾಸ ಅನುಮೋದನೆಯಂತೆ ಬಡಾವಣೆಯ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಮುಕ್ತಾಯ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ನಂತರ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ, ಶೇ. 100ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಕ್ರಮ ಜರುಗಿಸಲಾಗುವುದು. ಅಲ್ಲಿಯವರೆಗೆ ವಿನ್ಯಾಸದಲ್ಲಿನ ಯಾವುದೇ ನಿವೇಶನಗಳನ್ನು ಪರಭಾರೆ ಮಾಡತಕ್ಕದ್ದಲ್ಲ.
4. ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು ಹಾಗೂ ಅನುಮೋದನೆ ನೀಡಲಾದ ನಿರ್ದಿಷ್ಠ ಬಳಕೆಗೆ ಮಾತ್ರ ಅಭಿವೃದ್ಧಿಪಡಿಸತಕ್ಕದ್ದು. ಬದಲಾವಣೆ ಪ್ರಸ್ತಾಪಿಸಿದಲ್ಲಿ ಚಾಲ್ತಿಯಲ್ಲಿರುವ ಶುಲ್ಕ ಹಾಗೂ ನಿಯಮಗಳು ಅನ್ವಯವಾಗುತ್ತವೆ.
5. ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರುವ ಗಿಡ–ಮರಗಳನ್ನು ಸಾಧ್ಯವಾದಷ್ಟುಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಇಕ್ಕೆಲಗಳಲ್ಲಿ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳೆಸಲು ಸೂಕ್ತ ಕ್ರಮಕೈಗೊಳ್ಳಬೇಕು.
6. ಅನುಮೋದಿತ ವಿನ್ಯಾಸದಲ್ಲಿ ಮಳೆ ನೀರು ಕೊಯ್ಲಿಗಾಗಿ ಮತ್ತು ಅಂತರ್‌ಜಲವೃದ್ಧಿಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
7. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ–ಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
8. ಈ ಅನುಮೋದನೆಯನ್ನು ಕೆಟಿಸಿಪಿ (ತಿದ್ದುಪಡಿ) ಕಾಯ್ದೆ 2015ರ ಕಲಂ 17(2ಎ) ರಡಿಯಲ್ಲಿ ನೀಡಿರುವುದರಿಂದ, ಈ ಅನುಮೋದನೆಯನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವ ಸಂಬಂಧ ಉಪಯೋಗಿಸಲು ಬರುವುದಿಲ್ಲ.
9. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
10. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರವು ಯಾವುದೇ ಪೂರ್ವ ಸೂಚನೆಯು ಇಲ್ಲದೇ ತಂತಾನೇ ರದ್ದುಗೊಳ್ಳುತ್ತದೆ.
11. ಸರ್ಕಾರಿ ಖರಾಬು ಇದ್ದಲ್ಲಿ, ಸದರಿ ಪ್ರದೇಶವನ್ನು ಒತ್ತುವರಿ ಮಾಡದೆ ಹಾಗೇ ಮೀಸಲಿರಿಸಿ ಸಂರಕ್ಷಿಸತಕ್ಕದ್ದು.
12. ಸ್ಥಳೀಯ ಸಂಸ್ಥೆಗಳು ವಿಧಿಸುವ ಷರತ್ತುಗಳನ್ನು ಪಾಲಿಸತಕ್ಕದ್ದು.

13. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಅನುಮೋದನೆಯು ಯಾವ ಪೂರ್ವ ಸೂಚನೆಯೂ ಇಲ್ಲದೆ ಕೂಡಲೇ ರದ್ದಾಗುವುದು ಹಾಗೂ ಕೆಟಿಸಿಪಿ (ತಿದ್ದುಪಡಿ) ಕಾಯ್ದೆ 1961 ರಡಿಯಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು.

ಸಹಿ/-
ಸದಸ್ಯ ಕಾರ್ಯದರ್ಶಿ,
ಮಾಗಡಿ ಯೋಜನಾ ಪ್ರಾಧಿಕಾರ,
ಮಾಗಡಿ.

ಪ್ರತಿಯನ್ನು :

1) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ತಾವರೆಕೆರೆ ಗ್ರಾಮ ಪಂಚಾಯಿತಿ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ಇವರಿಗೆ ಕಳುಹಿಸುತ್ತಾ ಸದರಿ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ಮಾತ್ರ ನೀಡಲಾಗಿದ್ದು, ಪ್ರಶ್ನಿತ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆಗೊಳಿಸುವವರೆಗೂ ಯಾವುದೇ ನಿವೇಶನವನ್ನು ಖಾತಾ ಮಾಡಬಾರದೆಂದು ಈ ಮೂಲಕ ಸೂಚಿಸಲಾಗಿದೆ.
2) ಉಪನೋಂದಾಣಾಧಿಕಾರಿಗಳು, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ಇವರಿಗೆ ಕಳುಹಿಸುತ್ತಾ ಸದರಿ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ಮಾತ್ರ ನೀಡಲಾಗಿದ್ದು, ಪ್ರಶ್ನಿತ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆಗೊಳಿಸುವವರೆಗೂ ಯಾವುದೇ ನಿವೇಶನವನ್ನು ಖಾತಾ ಮಾಡಬಾರದೆಂದು ಈ ಮೂಲಕ ಸೂಚಿಸಲಾಗಿದೆ.
3) ಶ್ರೀ ಕೆ.ಎನ್. ಬೋರೇಗೌಡ, ನಿರ್ದೇಶಕರು, ಮೆ॥ ಕೆ.ಎನ್.ಎಸ್ ಇನ್‌ಫ್ರಾಸ್ಟ್ರಕ್ಚರ್,ನಂ. 1788/ಸಿ, 9ನೇ ಕ್ರಾಸ್, 5ನೇ ಮೈನ್,ಆರ್‌ಪಿಸಿ ಲೇಔಟ್, ವಿಜಯನಗರ, 2ನೇ ಹಂತ,ಬೆಂಗಳೂರು-40 ಇವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
4) ಕಛೇರಿ ಪ್ರತಿ.

13/3/17
ಸದಸ್ಯ ಕಾರ್ಯದರ್ಶಿ,
ಮಾಗಡಿ ಯೋಜನಾ ಪ್ರಾಧಿಕಾರ,
ಮಾಗಡಿ.